ಹಸಿ ಜಬರಿಯಿಂದ ಮನಸ್ಸೋ ಇಚ್ಛೆ ಬಾರಿಸತೊಡಗಿದಳು. ಉಳಿದ ಹೆಂಗಸರು ಅವಳೊಂದಿಗೆ ಯುವಕನ ಮೇಲೆ ದಾಳಿಗಿಳಿದರು. ಹರಿಜನ ಯುವಕರು ಬಯಲೊಳಗೆ ನುಗ್ಗಿ ಬಂದರು. ಆ ಯುವಕನನ್ನು ಅರಬೆತ್ತಲೆಗೊಳಿಸಿ ಹೊಂಡದ ನೀರಲ್ಲಿ ಮುಳುಗಿಸಿ ಉಸಿರುಗಟ್ಟುವಂತೆ ಮಾಡಿದರು. ಮೇಲುಸ್ತರದ ಕೆಲವು ಯುವಕರು ಹರಿಜನ ಹುಡುಗರ ಮೇಲೆ ಬಿದ್ದರು. ಕ್ಷಣಾರ್ಧದಲ್ಲಿ ಓಕುಳಿ ತನ್ನ ಉತ್ಸಾಹ ಕಳೆದುಕೊಂಡು, ಅಲ್ಲೋಲಕಲ್ಲೋಲಗೊಂಡಿತು. ಈ ಸುದ್ದಿ ಪೊಲೀಸರಿಗೂ ತಲುಪಿ, ಧಾವಿಸಿ ಬಂದು ಕೆಲವು ಯುವಕರನ್ನು ವ್ಯಾನಿನೊಳಗೆ ತುಂಬಿಕೊಂಡು ಹೋದರು. ಮಂಜುಳಾನ ಮೇಲಿನ ಈ ಕೃತ್ಯಕ್ಕೆ ಕಾರಣನಾದ ಹುಡುಗ ಬೇರೆ ಊರಿನವನಾಗಿದ್ದು, ತನ್ನ ಗೆಳೆಯನೊಂದಿಗೆ ಓಕುಳಿ ನೋಡಲು ಬಂದಿದ್ದ. ಮಂಜುಳಾನ ಸೌಂದರ್ಯ ಅವನನ್ನು ತೀವ್ರವಾಗಿ ಮರುಳುಗೊಳಿಸಿತ್ತು. ಸ್ವಭಾವತಃ ಕಾಮಾಂಧನಾಗಿದ್ದ ಆ ತರುಣ ಓಕುಳಿಯಾಟಕ್ಕಿಳಿದು, ಆ ನೆಪದಲ್ಲಿ ಈ ಅನಾಹುತ ಸೃಷ್ಟಿಸಿದ್ದ. ಪೊಲೀಸರು ಅವನನ್ನು ಲಾಕಪ್‌ನಲ್ಲಿ ಹಾಕಿ ಚೆನ್ನಾಗಿ ಒದ್ದು ಅವನ ಕಾಮದ ಪಿತ್ತವನ್ನು ಇಳಿಸಿದ್ದರು.

★★★

ಈ ಘಟನೆ ಜಾತಿ ವೈಮನಸ್ಸಿಗೂ ಕಾರಣವಾಗಿ ಕೇರಿಯ ಜನ ಊರೊಳಗೆ ಕಾಲಿಡದಂತಾಯಿತು. ಊರೊಳಗಿನ ಇತರೆ ಜಾತಿಯ ಮನುಷ್ಯರಲ್ಲೂ ವಿಶ್ವಾಸ, ಪ್ರೀತಿ ಉಳಿಯಲಿಲ್ಲವಾಗಿ, ಜಾತ್ರೆ, ಉತ್ಸವ, ಹಬ್ಬಹರಿದಿನಗಳು ಕಳೆ ಇಲ್ಲದಂತೆ ಜರುಗಿ, ನಾಲ್ಕು ಜನ ಕೂಡಿದಲ್ಲಿ ಜನಾಂಗೀಯ ದ್ವೇಷದ ವದಂತಿ, ಕಟ್ಟುಕತೆಗಳು ಹುಟ್ಟಿಕೊಳ್ಳುತ್ತ ಜೀವಪುರ ಬೂದಿ ಮುಚ್ಚಿದ ಕೆಂಡವಾಗಿ ಪರಿಣಮಿಸಿತು. ಇಂಥ ಉದ್ವೇಗದ ಹೊರಳಿನಲ್ಲಿ ದೇವರು ಏನು ಬುದ್ಧಿ ಕೊಟ್ಟನೋ ಶ್ರೀಮಠದ ಸ್ವಾಮಿಗಳು ಊರಿನ ಹಿರಿಯರನ್ನು ಕರೆಯಿಸಿಕೊಂಡರು. ಮತ್ತು ಸಾವಧಾನವಾಗಿ ಉಲಿದಿದ್ದರು,

"ಈ ಮನುಷ್ಯ ಕಾಯ ಮಣ್ಣಾಗುದದ. ಇರುತನಕ ಎಲ್ಲಾರೂ ಚಂದಂಗ ಬಾಳೂದ್ರಾಗ ಹಿತ ಅದ. ಜನ ಇದ್ರ ಊರು. ಇಲ್ಲದಿದ್ರ ಅದು ಸ್ಮಶಾನ. ಒಳಗ ಹಗೆತನ ಇಟ್ಕೊಂಡು ಜೀವಿಸುದ್ರಾಗ ಅರ್ಥ ಇಲ್ಲ. ನಮ್ಮೊಳಗ ಶಿವಾ ಇರಲಿ. ರಾಮ ಇರಲಿ, ಅಲ್ಲಾಹ್–ಏಸು ಇರಲಿ, ಬುದ್ಧ–ಮಹಾವೀರ ಇರಲಿ, ಆದ್ರ ರಾಕ್ಷಸ ಬ್ಯಾಡ. ಊರು ಕಟ್ಟಿದವರು ಈಗ ನಮ್ಮೆದುರು ಇಲ್ಲ. ಅವರ ಆತ್ಮದುಸಿರು ಈ ಜೀವಪುರದಾಗ ಬೆಚ್ಚಗ ಆದ. ಈ ಆತ್ಮದ ಚೇತನಕ ಭಂಗ ಬರಲಾರದ್ಹಂಗ, ಜಡಾ ಆಗದ್ಹಂಗ ಇರೋದು ಮುಖ್ಯ. ಉತ್ಸವಗಳು ನಮ್ಮ ಬದುಕಿನ ಪ್ರೀತಿಗಾಗಿ, ಉದಾರತೆಗಾಗಿ ನಡೀಬೇಕು. ಊರು ಮತ್ತು ಕೇರಿಗಳಿಗೆ ನೆಲಾ ಒಂದ ಅದ. ಆಕಾಶ ಒಂದss ಬೆಳಕು ಕೊಡುವ ಸೂರ್ಯಚಂದ್ರ ಒಂದ ಪರಮಾತ್ಮ ನಮಗ ಕೊಡುವ ನೀರು, ತಿನ್ನಲು ಕೊಡುವ ಅನ್ನ, ಉಸಿರಾಡಿಸಲು ಕೊಡುವ ಗಾಳಿ ಒಂದss ಅದ, ನಾವುನೀವು ಆ ಪರಮಾತ್ಮನ್ಹಂಗ ಏನೂ ಸೃಷ್ಟಿ ಮಾಡೋರಲ್ಲ. ಹೀಂಗ ಬಂದ ಹೀಂಗ ಹೋಗೋರೊ ನಾವು. ನಮ್ಮ ಬದುಕು ಅಂದ್ರ ಮಕ್ಕಳಾಟ ಇದ್ದ್ಹಾಂಗ. ಆಟ ಆದಮ್ಯಾಲೆ ಇಲ್ಲೇನೈತಿ? ಬರಿ ಶೂನ್ಯ. ನಿಮಗ ತಿಳಿದಿಲ್ಲ. ಎಲ್ಲೆ ಚಲೋ ಅದ, ಅಲ್ಲಿ ಅಂದಗೆಡಿಸೋರು ಬರ್ತಾರ. ಒಳ್ಳೆಯವರ ಮನಸ್ಸಿನ್ಯಾಗ ಕೆಟ್ಟ ಹುಳಾ ಬಿಡ್ತಾರ. ನಮ್ಮ ಜೀವಪುರದಾಗ ಮತ್ಸರ ಬ್ಯಾಡ, ಪ್ರೀತಿಯ ಅಮೃತ ಇರಲಿ. ಸಾವಿನ ಮಾತು ಬ್ಯಾಡ, ಸಂಜೀವಿನಿ ಇರಲಿ. ಬೆಂಕಿ ಬ್ಯಾಡ, ಹಣತೆಯ ದೀಪ ಇರಲಿ, ಇನ್ಮ್ಯಾಲೆ ನೀವೆಲ್ಲಾ ಒಂದಾಗಿ ಒಬ್ಬರಿಗೊಬ್ಬರು ಹೊಂದಿಕೊಂಡು ಚಂದ್ದಗಾ ಜೀವನ ನಡಿಸೀರಿ. ಪರಮಾತ್ಮಗ ಪ್ರೀತಿ ಬರುವ್ಹಾಂಗ ನಡ್ಕೊಳ್ರಿ."

ಶ್ರೀಗಳ ಮಾತು ಒರತೆಯ ನೀರಿನಂತೆ ತಿಳಿಯಾಗಿ ಕೂಡಿದ ಮಂದಿಯ ಮನಸ್ಸಿನ ಪಾಚಿಯನ್ನು ತೊಳೆದು ಹಾಕಿತು. "ದೇವರು, ಧರ್ಮದ ಹೆಸರಿನ್ಯಾಗ ಅನಿಷ್ಟ ಪದ್ಧತಿಗಳನ್ನು ನಡಸಬ್ಯಾಡ್ರಿ.